ಕಾವ್ಯಶ್ರೀ ಪತ್ರಿಮಠ, ಸುರಪುರ
ನಮ್ಮ ಪ್ರಾರ್ಥನೆ ಭಗವಂತನಿಗೆ ಕೇಳಿಸಬೇಕೆಂದರೆ...?



ಅವನಿಗೆ ಶ್ರವಣಶಕ್ತಿ ಚೆನ್ನಾಗಿದೆ. ಮನದಲ್ಲೇ ಪಿಸುಗುಟ್ಟಿದರೂ ಆದೀತು.

ಟಿ.ಎಂ. ಮಾನಪ್ಪ, ಶಿವಮೊಗ್ಗ
ರಾಮಾಯಣ ರಾಮನ ಕಥೆಯಾಯ್ತು. ಮಹಾಭಾರತ ಏಕೆ ಭಾರತದ ಕಥೆ ಆಗಲಿಲ್ಲ?
ಭಾ ಭಾವೋದ್ರೇಕ; ರ ರಕ್ತಸಂಬಂಧ; ತ ತಕರಾರು ಇದೇ ಮಹಾಭಾರತವಲ್ಲವೆ!

ಬಿ. ಜಯವಂತ ಪೈ, ಕುಂದಾಪುರ
ಅತ್ತೆಗೂ, ಕತ್ತೆಗೂ ವ್ಯತ್ಯಾಸವೇನು?
ಕತ್ತೆಗೆ ಇರುವಲ್ಲಿಯೇ ಚಾಕರಿ. ಅತ್ತೆಗೆ ವಿದೇಶದಲ್ಲಿ ಸೊಸೆ ಹೆತ್ತಾಗ ಕತ್ತೆಚಾಕರಿ.

ಅನಂತಪದ್ಮನಾಭ, ಮೈಸೂರು
ರಾಜಕಾರಣಿಗೆ ಹುಚ್ಚು ಹಿಡಿಸಿ, ಹೆಂಡ ಕುಡಿಸಿ, ಚೇಳಿನಿಂದ ಕುಟುಕಿಸಿದರೆ ಹೇಗಿರುತ್ತದೆ?
ವಿರೋಧಪಕ್ಷದ ಮುಖಂಡರಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಪ್ರೀತಿ ಬ್ಲೇಡ್ ತರಹ. ಮದುವೆ?



ಚೆನ್ನಾಗಿ ಬೋಳಿಸುವ ಸೇಫ್ಟಿ ರೇಜರ್.

ಜಗದೀಶ ಬಿ. ಹೊಸೂರು, ಮೈಸೂರು
ಚಿಕಿತ್ಸಾಲಯಕ್ಕೆ ಕಾಲಿಟ್ಟ ತಕ್ಷಣ ಎಲ್ಲಾ ರೀತಿಯ ಪರೀಕ್ಷೆ ಮಾಡಿಸಿ ಎಂದು ಬರೆಯುವುದೇಕೆ?
ತನ್ನಂತೆ ಇತರರೂ ಬಗೆದರೆ, ಬಗೆದು ಕಮಿಷನಿತ್ತರೆ, ಬಿನ್ನಾಣವಕ್ಕು ವೈದ್ಯಜ್ಞ ಎಂಬ ಧೋರಣೆ.

ವಿ. ಹೇಮಂತಕುಮಾರ್, ಬೆಂಗಳೂರು
ದೀಪಾವಳಿಯನ್ನು ಇಂಗ್ಲಿಷ್‌ನಲ್ಲಿ ದಿವಾಳಿ ಎಂದು ಕರೆಯುತ್ತಾರೆ. ಏಕೆ ಸರ್?
ಕನ್ನಡದ್ದು ಹಬ್ಬದ ಹೆಸರು; ಇಂಗ್ಲಿಷಿನದು ಹಬ್ಬದ ಖರ್ಚಿನ ನಂತರದ ಪರಿಸ್ಥಿತಿಯ ಸೂಚಕ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಬದುಕು ಮತ್ತು ಬರಹಗಳ ನಡುವಣ ವ್ಯತ್ಯಾಸವೇನು?
ಬದುಕು ರಸಸಮುದ್ರ. ಬರಹ ಅದರ ಒಂದು ಬೊಗಸೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ನೆಮ್ಮದಿ ಬಯಸುವವರು ಮನೆ ಬದಲಾಯಿಸಬೇಕೋ, ಮನಸ್ಸು ಬದಲಾಯಿಸಬೇಕೋ?
ಚಟ, ಸಂಗ ಬದಲಾಯಿಸಿದರೆ ಸಾಕು.

ಅನಸೂಯ ಟಿ, ಕೇದಿಗೆಮನೆ
ಸತ್ಯ ಹೊರಗೆ ಬರಲು ಎಷ್ಟು ಸಮಯ ಹಿಡಿಯುತ್ತೆ?
ಎಲ್ಲಿಂದ? ಕುಡುಕನಿಂದಾದರೆ ಕ್ವಾರ್ಟರ್‌ನ ನಶೆ ಏರುವಷ್ಟು ಸಮಯ.

ಜಿ. ಪ್ರದೀಪಕುಮಾರ್, ಹೂವಿನಹಡಗಲಿ
ಕೆಲವರು ಒಳ್ಳೆಯ ಕೆಲಸ ಮಾಡುವುದನ್ನು ಮುಂದೂಡಲು ಕಾರಣವೇನು?
'ಯಾವುದೇ ಒಳ್ಳೆಯ ಕೆಲಸ ಮಾಡಿದರೂ ಶಿಕ್ಷೆ ಖಚಿತ' ಎಂಬ ಇಂಗ್ಲಿಷ್ ಗಾದೆಯನ್ನು ಕೇಳಿ ಹೆದರಿರುತ್ತಾರೆ.

ವೈ.ಜಿ. ನರಸಿಂಹನ್, ಶಿವಮೊಗ್ಗ
ನಮ್ಮ ವಿದ್ಯಾರ್ಥಿಗಳ ಬದುಕು ಹೂವಿನಂತೆ ಅರಳಬೇಕಾದರೆ ಪೋಷಕರ ಮತ್ತು ಶಿಕ್ಷಕರ ಪಾತ್ರವೇನು?
ವಿದ್ಯಾರ್ಥಿಗಳದು ಗಿಡದ, ಪೋಷಕರದು ಪಾತಿಯ, ಶಿಕ್ಷಕರದು ಗೊಬ್ಬರದ ಪಾತ್ರ.

ಬಿ.ಆರ್. ಉಷಾ, ಕೆನಡಾ
ಚೆನ್ನಾಗಿ ತಿನ್ನುವವರಿಗೆ ಫುಡಿ ಅಂತಾರೆ. ತಿನ್ನದವರಿಗೆ?
ಕಡ್ಡಿ.

ಜಯಶ್ರೀ, ಬೆಂಗಳೂರು
ಗಾನವೆಂಬ ವಿದ್ಯೆ ಬಹಳ ಕಠಿಣ. ಪಾನವೆಂಬ (ಸುರಾ) ವಿದ್ಯೆ?
ಅದೂ ಕಠಿಣವೇ, ಕಲಿತವರ ಆಪ್ತವಲಯಕ್ಕೆ.

## ವಾರದ ಪ್ರಶ್ನೆ

ಎಂ.ಕೆ. ರವಿಕಾಂತ, ತುಮಕೂರು
ಕೋಟಿ ರೂಗಳಿದ್ದರೂ ತಿನ್ನುವುದೊಂದೇ ತುತ್ತು ಅನ್ನ ಎಂದು ಭಾಷಣ ಮಾಡಿ ಗೆದ್ದಮೇಲೆ ಕೋಟಿ ಹೊಡೆಯುವುದೇಕೆ?
ಅನ್ನದ ಬಾಬ್ತಷ್ಟೇ ತುತ್ತಿನ ಲೆಕ್ಕ. ಮಿಕ್ಕೆಲ್ಲವನ್ನು ಟನ್ನುಗಟ್ಟಲೆ ಕಬಳಿಸಲು ಬಂಡವಾಳ ಬೇಕಲ್ಲ.

ಮಲ್ಲಿಕಾರ್ಜುನ, ಸುರಧೇನುಪುರ
ಆಡಿಕೊಳ್ಳುವವರು ಕೊಳ್ಳುವುದು ಏನನ್ನು?
ಆಡಿಬಲ್ (audible)ವಿಷಯಗಳನ್ನು, ಚರ್ಚೆಗಾಗಿ.

ಪಿ. ಚಿದಾನಂದ, ಜೆ.ಜಿ.ಹಳ್ಳಿ
ಬಡವರಾಗಿ ಹುಟ್ಟುವುದು ಹಿಂದಿನ ಜನ್ಮದ ಕರ್ಮಫಲವೋ, ಈ ಜನ್ಮದ ಪುಣ್ಯಫಲವೋ?
ಇಂದಿನ ಪುಣ್ಯಫಲವೇ. ಬೆಂಕಿಗೆ ಬಿದ್ದಾಗಲೇ ಚಿನ್ನ ಅಪರಂಜಿಯಾಗುವುದು.

ಶ್ರುತಿ ರಿಗ್ರೆಟ್ ಐಯ್ಯರ್, ನ್ಯೂಜರ್ಸಿ
ಸಪ್ತಪದಿ ಸುತ್ತಿದ್ದರೂ ವಿಚ್ಛೇದನ ಏಕೆ ಜಾಸ್ತಿ ಆಗುತ್ತಿದೆ?



ಪ್ರೀತಿಯ ಧಾರೆ ಬತ್ತಿ ಪರಸ್ಪರರಲ್ಲಿ ರಿಸೆಪ್ಷನ್ (ಗ್ರಹಿಕೆ) ವೀಕ್ ಆಗುವುದರಿಂದ.

ವಿಜಯಕುಮಾರ್ ಎಚ್.ಕೆ. ರಾಯಚೂರು
ಎನ್ನ ಭಕ್ತಿ ದೈವದ ಮೇಲಿರುವಾಗ ಮಧ್ಯದಲ್ಲಿ ಪೂಜಾರಿ, ಸ್ವಾಮೀಜಿಗಳೇಕೆ ಬೇಕು ರಾಮ್‌ಜಿ?
ಭಕ್ತಿಯೆಂಬ ಮೊಬೈಲಿಗೆ ದೈವವೆಂಬ ನೆಟ್‌ವರ್ಕ್ ಸಿಗಲು ಇವರು ಸಿಮ್ ಕಾರ್ಡ್‌ಗಳಂತೆ.

ಮಂಡಿ ಕುಮಾರ್, ಬೆಂಗಳೂರು
ದೇವಸ್ಥಾನಕ್ಕೆ ಹೋದಾಗ ಬರುವ ಭಕ್ತಿ ಮನೆಯ ದೇವರಮನೆಯಲ್ಲಿ ಬರುವುದಿಲ್ಲ. ಏಕೆ?
ದೇವರಮನೆಗೆ ಅಡುಗೆಮನೆಯ ಘಮ, ಆತ್ಮೀಯರ ಸಲ್ಲಾಪ ನುಗ್ಗುತ್ತದಲ್ಲ.

■ ರಾಮ್